ಕೃಷಿ ಮಾರಾಟ ಇಲಾಖೆ,

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ.

**ದಿನಾಂಕ :23-09-2020 ರಂದು ಮಧ್ಯಾಹ್ನ 12.00 ಗಂಟೆಗೆ ವಿಜಯಪುರ ಆಡಳಿತ ಕಛೇರಿಯ ಸಭಾ ಭವನದಲ್ಲಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ ಸುರೇಶ ಐಗೌಡ ಬಿರಾದಾರ, ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಿತಿಯ ಸಾಮಾನ್ಯ ಸಭೆಯ ನಡುವಳಿಕೆಗಳು.**

-:: ಸಭೆಗೆ ಹಾಜರಿದ್ದ ಸದಸ್ಯರುಗಳು ::-

| | | |
|---|---|---|
| 1. | ಶ್ರೀ ಸುರೇಶ. ಐಗೌಡ. ಬಿರಾದಾರ | ಅಧ್ಯಕ್ಷರು |
| 2. | ಶ್ರೀ ಕಲ್ಲಪ್ಪ. ಶಿವಪ್ಪ. ಇಂಡಿ, | ಉಪಾಧ್ಯಕ್ಷರು |
| 3. | ಶ್ರೀ ಚಂದ್ರಶೇಖರ. ಪರುತಗೌಡ. ಪಾಟೀಲ | ಸದಸ್ಯರು |
| 4. | ಶ್ರೀ ಸಾಹೇಬಗೌಡ. ದ್ಯಾಮಗೌಡ. ಬಿರಾದಾರ | ಸದಸ್ಯರು |
| 5. | ಶ್ರೀ ಶೇಖರ. ರಾಚಪ್ಪ. ಗೊಳಸಂಗಿ | ಸದಸ್ಯರು |
| 6. | ಶ್ರೀ ಸುರೇಶ. ಕಿಶನ. ಚವ್ಹಾಣ | ಸದಸ್ಯರು |
| 7. | ಶ್ರೀ ಪಿರಗೊಂಡ. ಮಲಕಪ್ಪ. ಗದ್ಯಾಳ | ಸದಸ್ಯರು |
| 8. | ಶ್ರೀ ಸುರೇಶ ಮಲ್ಲಪ್ಪ ತಳವಾರ | ಸದಸ್ಯರು |
| 9. | ಶ್ರೀ ಹಣಮಂತ. ಶಿವಪ್ಪ. ಲೋಕುರಿ | ಸದಸ್ಯರು |
| 10. | ಶ್ರೀ ವಿಶ್ವನಾಥ. ಬಸವನಗೌಡ. ಪಾಟೀಲ | ಸದಸ್ಯರು |
| 11. | ಶ್ರೀಮತಿ ಮಾದೇವಿ. ಶಂಕರಗೌಡ. ಪಾಟೀಲ | ಸದಸ್ಯರು |
| 12. | ಶ್ರೀ ಅಣ್ಣಪ್ಪ ಕಲ್ಲಪ್ಪ ದಾಶ್ಯಾಳ | ಸದಸ್ಯರು |
| 13. | ಶ್ರೀ ಸಂಗಪ್ಪ ರಾವತಪ್ಪ ತಮಗೊಂಡ | ಸದಸ್ಯರು |
| 14. | ಶ್ರೀಮತಿ ಮಹಾದೇವಿ ಶರಣಪ್ಪ ಕಕಮರಿ | ಸದಸ್ಯರು |
| 15. | ಶ್ರೀಮತಿ. ಸಾಬವ್ವ. ಯ. ಪೂಜಾರಿ | ಸದಸ್ಯರು |

| ಸಭೆಗೆ ಗೈರು ಹಾಜರಿದ್ದ ಸದಸ್ಯರು | ಸಭೆಗೆ ಹಾಜರಿದ್ದ ಅಧಿಕಾರಿಗಳು |
|---|---|
| 1) ಶ್ರೀ ವಿಜಯಕುಮಾರ.ಶಿ.ಮಂಗಳವೇಡೆ.<br>2) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಳಗಾವಿ ಮತ್ತು ಇಲಾಖಾ ಪ್ರತಿನಿಧಿಗಳು, ವಿಜಯಪುರ. | 1) ಶ್ರೀ ಬಿ. ಎಲ್ ಜುಮನಾಳ, ಕಾರ್ಯದರ್ಶಿ(ಪ್ರ), ಕೃ,ಉ,ಮಾ,ಸ, ವಿಜಯಪುರ.<br>2) ಶ್ರೀ ಆಯ್. ಎಸ್. ಕದರಿ,ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾ.ಅ.ಯೋ, ವಿಜಯಪುರ. |

ಪ್ರಾರಂಭದಲ್ಲಿ ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು ಕಾರ್ಯದರ್ಶಿಗಳು ಸ್ವಾಗತಿಸಿದರು, ನಂತರ ವಿಷಯದ ಮೇಲೆ ಚರ್ಚೆಯನ್ನು ಪ್ರಾರಂಭಿಸಲಾಯಿತು.

**ವಿಷಯ ಸಂ.01: ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವ ಕುರಿತು ವಿಚಾರ.**

**ಠರಾವು ಸಂ.01:** ದಿನಾಂಕ:14-08-2020 ರಂದು ಜರುಗಿದ ಸಮಿತಿಯ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಡವಳಿಕೆಗಳನ್ನು ಓದಲಾಯಿತು. ನಡವಳಿಕೆಗಳ ಮೇಲೆ ಕ್ರಮ ಕೈಕೊಂಡಿರುವುದಕ್ಕೆ ಕಾರ್ಯದರ್ಶಿಯವರು ವಿವರಣೆಯನ್ನು ಸಭೆಯ ಗಮನಕ್ಕೆ ತಂದರು. ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸಲಾಯಿತು.

**ವಿಷಯ ಸಂ.02:** **2020 ನೇ ಅಗಷ್ಟ ತಿಂಗಳ ಆದಾಯ ಮತ್ತು ವೆಚ್ಚಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.**

**ಠರಾವು ಸಂ.02:**

| ತಿಂಗಳು | ಆದಾಯ | ವೆಚ್ಚ | ಉಳಿತಾಯ | ಕೊರತೆ |
|---|---|---|---|---|
| ಅಗಷ್ಟ–2020 | 1292799 | 1506168 | -- | -213369 |

ಸದರಿ ತಿಂಗಳ ಆದಾಯ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ, ಕಾರ್ಯದರ್ಶಿಯವರು ನೀಡಿದ ವಿವರಣೆಯಂತೆ ಅನುಮೋದಿಸಿ ತೀರ್ಮಾನಿಸಲಾಯಿತು.

**ವಿಷಯ ಸಂ.03:** **ಲೈಸನ್ಸ್ ಬೇಡಿ ಬಂದ ಅರ್ಜಿಗಳ ಕುರಿತು.**

**ಠರಾವು ಸಂ.03:** 2020-21 ನೇ ಸಾಲಿನಿಂದ ಮುಂದಿನ 10 ವರ್ಷಗಳ ಕಾಲಾವಧಿಗೆ ಹೊಸದಾಗಿ/ನವೀಕರಣ ಲೈಸನ್ಸ್‌ಗಳನ್ನು ನೀಡಲು ಅರ್ಜಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಿ ಲೈಸನ್ಸ್ ಮಂಜೂರಾತಿಗಾಗಿ ಈ ಕೆಳಕಂಡ ಪ್ರಸ್ತಾವನೆಗಳನ್ನು ಸಮಿತಿಯಲ್ಲಿ ಮಂಡಿಸಲಾಯಿತು.

| ಹೊಸದಾಗಿ ಬಂದ ಲೈಸನ್ಸಗಳು | |
|---|---|
| ನಮೋ ಫುಡ್ಸ್, ವಿಜಯಪುರ.<br>ಪ್ರೋ॥ ಶ್ರೀ ಅಶ್ವಿನ ಪೋರವಾಲ್, ಎಪಿಎಂಸಿ ಯಾರ್ಡ, ವಿಜಯಪುರ | ದಲ್ಲಾಲಿ |
| ಮಾರುತಿ ಟ್ರೇಡಿಂಗ್ ಕಂಪನಿ, ಪ್ರೋ॥ ಶ್ರೀ ಮನರಾಮ ಜೀತರಾಮ, ಎಪಿಎಂಸಿ ಯಾರ್ಡ, ವಿಜಯಪುರ. | ದಲ್ಲಾಲಿ |
| ಶ್ರೀ ನಂದಾದೀಪ ಇಂಡಸ್ಟ್ರೀಜ್, ಪ್ರೋ॥ ರಾಕೇಶ ಸುರೇಶ ತಡಲಗಿ ವಿಜಯಪುರ | ಸಂಸ್ಕರಣೆ, ಸಂಗ್ರಹಣೆ, ರಫ್ತು, ಆಮದು |

ಮೇಲ್ಕಂಡಂತೆ ಅಗತ್ಯವಿರುವ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದನ್ನು ಪರಿಶೀಲಿಸಲಾಯಿತು. ಹಾಗೂ ಸದರಿ ಲೈಸನ್ಸ್ ನೀಡುವ ಪೂರ್ವದಲ್ಲಿ ಸ್ಥಳ ಪರಿಶೀಲನೆ ಮಾಡಿ ಹೊಸದಾಗಿ ಲೈಸನ್ಸ್ ನೀಡಲು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ ಸಂ.04:** **2019-20 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಪ್ಯಾಕೇಜ್-01 ರ ಕಾಮಗಾರಿಯ ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ಒಪ್ಪುವ ಕುರಿತು.**

**ಠರಾವು ಸಂ.04:** 2019-20 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ 1) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಆವರಣದಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಇಂಡಿ ರಸ್ತೆಗೆ ಅಭಿಮುಖವಾಗಿ ಸಿಬ್ಬಂದಿ ವಸತಿ ಗೃಹಗಳ ಜಾಗದಲ್ಲಿ ಚಿಕ್ಕ/ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು. 2) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಆವರಣದಲ್ಲಿ ತರಕಾರಿ ಮಾರುಕಟ್ಟೆ ಹರಾಜು ಕಟ್ಟೆಗಳ ಮಧ್ಯಭಾಗದಲ್ಲಿರುವ ಖಾಲಿ ಜಾಗದಲ್ಲಿ ಚಿಕ್ಕ ಮಳಿಗೆಗಳನ್ನು ನಿರ್ಮಿಸುವುದು. 3) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದ ಹಣ್ಣು ಮತ್ತು ತರಕಾರಿ ಪೇಟೆಯಲ್ಲಿ ಸ್ಟೇಶನ್ ರಸ್ತೆಗೆ ಅಭಿಮುಖವಾಗಿ ಅಂಗಡಿ ಮಳಿಗೆಗಳನ್ನು ನಿರ್ಮಿಸುವ (ಪ್ಯಾಕೇಜ್-01) ರ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿ 04 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ದಾಖಲಾತಿಗಳನ್ನು

ಪರಿಶೀಲಿಸಿ ತುಲನಾತ್ಮಕ ತಃಖ್ತೆಯನ್ನು ತಯಾರಿಸಿ ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಮಾರುಕಟ್ಟೆ ಅಭಿವೃದ್ಧಿ ಯೋಜನೆ ಉಪ ವಿಭಾಗ ನಂ:3 ರವರಿಗೆ ಕಳುಹಿಸಲಾಗಿದ್ದು, ಅದರಂತೆ ಸದರಿಯವರು ತುಲನಾತ್ಮಕ ತಃಖ್ತೆಯನ್ನು ತಯಾರಿಸಿ ಸಲ್ಲಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | ಟೆಂಡರಗಿಟ್ಟ ಮೊತ್ತ 2017-18 | ಗುತ್ತಿಗೆದಾರರು ನಮೂದಿಸಿದ ಮೊತ್ತ | ಷೆಡ್ಯೂಲ್ ಬಿ ದರಗಳಿಗೆ ಹೋಲಿಸಿದಾಗ ಆಗುವ ಶೇಕಡಾವಾರು ಹೆಚ್ಚು/ ಕಡಿಮೆ |
|---|---|---|---|---|
| 1 | ಶ್ರೀ ಹೆಚ್.ಎ.ಮಾಶ್ಯಾಳಕರ | 1,76,44,630=07 | 1,63,58,481=55 | 7.28% 1 ನೇ ಕಡಿಮೆ ದರ |
| 2 | ಶ್ರೀ ಗಿರಿಶ ಜಿ ಸಜ್ಜನ | | 1,72,84,940=23 | 2.03 % 2ನೇಯ ಕಡಿಮೆ ದರ |

ಸದರಿ ಟೆಂಡರ ಪ್ರಕ್ರಿಯೆಯಲ್ಲಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕವಾಗಿ ಇಬ್ಬರು ಜನ ಗುತ್ತಿಗೆದಾರರು ಅನರ್ಹರಾಗಿರುತ್ತಾರೆ ಹಾಗೂ ಇಬ್ಬರೂ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಇವರಲ್ಲಿ **ಶ್ರೀ ಹೆಚ್. ಎ. ಮಾಶ್ಯಾಳಕರ** ರವರು ಶೆಡ್ಯೂಲ್-ಬಿ ಮೇಲೆ **ರೂ. 1,63,58,481=55** ಕಡಿಮೆ ದರ ನಮೂದಿಸಿರುವುದನ್ನು ಹಾಗೂ ಸದರಿಯವರು ನಮೂದಿಸಿದ ಶೇಕಡಾವಾರು 7.28 ಕಡಿಮೆ ಇರುವುದನ್ನು ಸದರಿ ಗುತ್ತಿಗೆದಾರರ ದರಗಳು ಒಂದನೇಯ ಕಡಿಮೆ ದರ ಇರುವುದನ್ನು ಸದರಿ ದರಗಳನ್ನು ಒಪ್ಪಿ, ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುವ ಸಂಗತಿಗಳನ್ನು ಕಾರ್ಯದರ್ಶಿಯವರು ಸಮಿತಿ ಸಭೆಯ ಗಮನಕ್ಕೆ ತಂದು ವಿವರಿಸಿದರು.

ಸಮಿತಿ ಸಭೆಯು ಈ ಕುರಿತು ಕೂಲಂಕುಷವಾಗಿ ಚರ್ಚಿಸಿ ಪ್ಯಾಕೇಜ್ 1 ರ ಕಾಮಗಾರಿಗಳಿಗೆ ಶ್ರೀ ಹೆಚ್ ಎ ಮಾಶ್ಯಾಳಕರ ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.1,63,58,480=55 ಗಳ ಟೆಂಡರ್ ದರಗಳಿಗೆ ಒಪ್ಪಿ, ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂ.05:** **2019-20 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಪ್ಯಾಕೇಜ್-02 ರ ಕಾಮಗಾರಿಯ ಆರ್ಥಿಕ ಬಿಡ್‌ನ ತುಲನಾತ್ಮಕ ತಃಖ್ತೆಯನ್ನು ಒಪ್ಪುವ ಕುರಿತು.**

**ಠರಾವು ಸಂ.05:** 2019-20 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ 1) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಆವರಣದಲ್ಲಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 02 ನೇ ಮುಖ್ಯ ರಸ್ತೆಗಳಿಗೆ ಫುಟ್‌ಪಾತ್ ನಿರ್ಮಾಣ. 2) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ವ್ಯಾಪ್ತಿಯಲ್ಲಿ ಬರುವ ಬಸವನ ಬಾಗೇವಾಡಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿರುವ 10 ಸಂಖ್ಯೆ ಚಿಕ್ಕ ಮಳಿಗೆಗಳಿಗೆ ಡಬ್ಲುಪಿಸಿ ಮಾಡುವುದು. 3) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಟೆಂಡರ್ ಹಾಲಿನ ಮೇಲೆ ಸಭಾಭವನ ನಿರ್ಮಿಸುವ ಕಾಮಗಾರಿ. 4) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ವಸತಿ ಸಂಕೀರ್ಣ ನಿರ್ಮಿಸುವುದು. 5) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ವಿಜಯಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ